

# ಮಾವ್ಲೋಲಿನೊಂಗ್ ಎಂಬ ಪುಟ್ಟ ಸುಂದರಿ

**ಏಷ್ಯಾದಲ್ಲೇ ಅತ್ಯಂತ ಸ್ವಚ್ಛ ಹಳ್ಳಿಯಿದು. ಇದಕ್ಕಾಗಿ ಇವರು ಯಾವ ಸ್ವಚ್ಛತಾ ಆಂದೋಲನವನ್ನೂ ಕೈಗೊಂಡಿಲ್ಲ. ಸ್ವಚ್ಛತೆ ಇವರ ಜೀವನಶೈಲಿಯಲ್ಲೇ ಇದೆ.**

**ಚಿತ್ರ ಲೇಖನ:**
**ರವಿರಾಜ್ ವಳಲಂಬೆ**

ಮಾವ್ಲೋಲಿನೊಂಗ್ ಮೇಘಾಲಯದ ಪುಟ್ಟ ಹಳ್ಳಿ. ಈ ಹಳ್ಳಿಯಲ್ಲಿರೋದು ಕೇವಲ 500 ಚಿಲ್ಲರೆ ಮಂದಿ; 200ರಷ್ಟು ಕುಟುಂಬಗಳು. ಈ ಹಳ್ಳಿಯನ್ನು ನೋಡಲು ದೇಶ, ವಿದೇಶಗಳಿಂದ ಪ್ರವಾಸಿಗರು ಬರುತ್ತಾರೆ. ಆ ಹಳ್ಳಿಯಲ್ಲಿ ಅಂಥಾದ್ದೇನಿದೆ ಎಂಬ ಕುತೂಹಲ ಸಹಜವೇ. ಹೌದು, ಮಾವ್ಲೋಲಿನೊಂಗ್ 2003ರಲ್ಲಿ 'ಏಷ್ಯಾದಲ್ಲೇ ಅತ್ಯಂತ ಸ್ವಚ್ಛ ಹಳ್ಳಿ' ಎಂದು ಅಧಿಕೃತವಾಗಿ ಘೋಷಣೆಯಾಗಿದೆ. ಹಾಗೆ ನೋಡಿದರೆ ಅದು ಮೊದಲಿನಿಂದಲೂ ಪ್ರವಾಸೀ ತಾಣ. ಈಗ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ.

ಮಾವ್ಲೋಲಿನೊಂಗ್ ಇರುವುದು ಶಿಲ್ಲಾಂಗ್‌ನಿಂದ ಸುಮಾರು 78 ಕಿಲೋಮೀಟರ್ ದೂರದಲ್ಲಿ. ಉತ್ತರ ಖಾಸಿ ಬೆಟ್ಟಗಳ ತಪ್ಪಲಲ್ಲಿರುವ ಈ ಹಳ್ಳಿ  ಬಾಂಗ್ಲಾ ದೇಶದ ಗಡಿ ಭಾಗದಲ್ಲೇ ಇದೆ. ನಾವು ಪ್ರಯಾಣಿಸುತ್ತಿದ್ದ ಕಾರು ಮುಖ್ಯ ರಸ್ತೆ ಬಿಟ್ಟು ಮಾವ್ಲೋಲಿನೊಂಗ್ ಹಳ್ಳಿಯತ್ತ ತಿರುಗಿಕೊಂಡಾಗ ನಮಗೆ ಬೇರೆಯದೇ ಲೋಕಕ್ಕೆ ಬಂದ ಅನುಭವ. ಮಾವ್ಲೋಲಿನೊಂಗ್ ಗೆ ಸಂಪರ್ಕಿಸುವುದು ಮಣ್ಣಿನ ರಸ್ತೆಯ ಮೂಲಕವೇ ಅದರೂ ಆ ರಸ್ತೆಯಲ್ಲಿ ಹುಡುಕಿದರೂ ಕಸ ಸಿಗದು. ಈ ಸ್ವಚ್ಛತೆಯೊಂದಿಗೆ ಮಾವ್ಲೋಲಿನೊಂಗ್ ನಮ್ಮನ್ನು ಸ್ವಾಗತಿಸುತ್ತದೆ.

ಮೇಘಾಲಯದ ಈ ಪುಟ್ಟ ಹಳ್ಳಿಗೆ ನಾವು ಕಾಲಿಟ್ಟಾಗ ನಡು ಮಧ್ಯಾಹ್ನ. ಆಗಲೇ ಅಲ್ಲಿ ಹತ್ತಾರು ಪ್ರವಾಸಿಗರ ವಾಹನಗಳು ಸಾಲು ಸಾಲಾಗಿ ನಿಂತಿದ್ದವು. ಇಲ್ಲಿ ಕಸ ಹಾಕಬೇಡಿ ಎಂಬ ಯಾವ ಬೋರ್ಡೂ ಅಲ್ಲಿಲ್ಲ. ಅಲ್ಲಲ್ಲಿ ಕಾಣುವ ಬಿದಿರಿನ ಕಸದಬುಟ್ಟಿಗಳು ಮಾತ್ರ ಕಸವನ್ನು ಎಲ್ಲೆಂದರಲ್ಲಿ ಎಸೆಯದಂತೆ ತಡೆಯುತ್ತವೆ.

ಅಲ್ಲಿ ಕಾಣುವುದೆಲ್ಲ ಸಾಂಪ್ರದಾಯಿಕ ಬಿದಿರಿನ ಕಲಾತ್ಮಕ ಮನೆಗಳು. ಆ ಮನೆಗಳನ್ನು ನೋಡುವುದೇ ಚಂದ. ಅಲ್ಲಿನ ಜನರೂ ಅಷ್ಟೇ, ಮೈ, ಕೈ, ಬಟ್ಟೆಬರೆ ಎಲ್ಲವೂ ಸ್ವಚ್ಛ. ಈಗೇನೋ ಸ್ವಚ್ಛ ಭಾರತ ಅಭಿಯಾನದ ಹೆಸರಿನಲ್ಲಿ ಸ್ವಚ್ಛತಾ ಆಂದೋಲನ ನಡೆಯುವುದನ್ನು ದಿನನಿತ್ಯ ಕಾಣುತ್ತೇವೆ. ಅದಕ್ಕೋಸ್ಕರ ಸರಕಾರಗಳು ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತವೆ. ಆದರೆ, ಸ್ವಚ್ಛತೆ ಎನ್ನುವುದೂ ಒಂದು ಮಾನಸಿಕ ಸ್ಥಿತಿ ಅನ್ನುವುದಕ್ಕೆ ಮಾವ್ಲೋಲಿನೊಂಗ್ ಸಾಕ್ಷಿ.

ಈ ಹಳ್ಳಿ ಇಷ್ಟೊಂದು ಸ್ವಚ್ಛವಾಗಿರಲು ಅಲ್ಲಿ ಯಾವ ಆಂದೋಲನಗಳೂ ನಡೆಯಲಿಲ್ಲ. ಅಥವಾ ಇಲ್ಲಿಗೆ